ಪದಬಂಧ




ಎಡದಿಂದ ಬಲಕ್ಕೆ

1. ಇಷ್ಟು ಉದ್ದದ ಆದೇಶದ ಗುರಿಯಾದರೂ ಏನು? (3)
3. ಚೋರರ ಮಾಹಿತಿ ಸಂಗ್ರಹಿಸಲು ಇನ್ನೊಂದು ಓಡಾಟ (3)
4. ಮುಸುಕು ಎಳೆದೊಡನೆ ಕಂಡದ್ದು ತಲೆ (3)
6. ಕಡಲ ಹಿನ್ನೀರಿನ ಮುಂದಿನ ದೃಶ್ಯ ಚಿತ್ತಾಕರ್ಷಕ (4)
7. ಕೇಳಿದ್ದರ ಬದಲಿಗೆ ಸಿಕ್ಕಿದ್ದು ನಾಲ್ಕರ ಒಂದಂಶ ಅಷ್ಟೆ (4)
9. ರಾತ್ರಿಯಿಡೀ ತಣ್ಣಗೆ ರೂಪಿಸಿದ್ದು ಸಮರೋಪಾಯ (4)
11. ಪಹರೆ ಕೆಲಸ ಆರಂಭಿಸುವ ಮೊದಲು ತಿಂಡಿ ಆಯಿತೇ? (4)
15. ಕಡೆಯಲ್ಲಿ ಅದೇಕೋ ಎಲ್ಲರ ನಡುವೆ ಭಾರೀ ಯುದ್ಧ (3)
17) ಪರಶುರಾಮನದು ಎಂಥ ಅದ್ಭುತ ಚೆಲುವು ! (3)

ಮೇಲಿಂದ ಕೆಳಕ್ಕೆ

1. ಊರಿಗೆ ನಡುಕ ಹುಟ್ಟಿಸುವ ಆ ಸರ್ಪ (3)
2. ಮಾಸಾಶನದಿಂದ ಕಷ್ಟ ನಿರ್ಮೂಲನವಾಯಿತು (3)
3. ಹೊಸ ರಾಗಗಳ ವಿವರಗಳೆಲ್ಲ ಇಲ್ಲಿ ಶೇಖರ (3)
5. ಕಮ್ಮಿ ಏನಿಲ್ಲ, ಎಂಥ ಕೈವಾಡ! (3)
6. ತಾಮರಸ ನಡುವೆ ತಪ್ಪುವುದಿಲ್ಲ ಹೊಟ್ಟೆಕಿಚ್ಚು (3)
8. ಗುಂಟೂರಿನಲ್ಲಿ ಎಂಥ ಭಾರೀ ಚರಂಡಿ! (3)
10. ಬೆಲೆಗೆ ತಕ್ಕಂತೆ ಸಿಕ್ಕಿದೆ ಎಲೆ – ಅಡಿಕೆ (3)
12. ಕೆಲಸಕ್ಕೆ ತಕ್ಕಂತಿದ್ದ ಸಮಯವೇ ಬುಡಮೇಲಾಯಿತೇ? (3)
13. ಈಜಿ ದಾಟಿಸುವ ಪರೀಕ್ಷೆಯನ್ನು ಗೆದ್ದು ಬಾ (3)
14. ವ್ಯಾಪಾರವೇ ಇಲ್ಲವೆಂದು ರೋದಿಸಿದರೆ ಹೇಗೆ? (3)

## 05-2-15ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅನುಪಮ; 3. ಮರುಳು; 4. ನಪಾಶು; 6. ಕುದುರಿಸು; 7.ಮೇನಕೆ; 9. ಕರಿದು; 11. ನಿಶಾನೆ; 13. ಹರುಕು; 15. ಅಂಬಾಸುತ; 17. ರದ್ದತಿ; 18. ವರ್ಜಿತ; 19. ಮನ್ವಂತರ

ಮೇಲಿಂದ ಕೆಳಕ್ಕೆ:

1. ಅಳುಕು; 2. ಮನಸು; 3. ಮಜ್ಜನ; 5. ಸುಪಾರಿ; 7. ಮೇದಿನಿ; 8. ಕೆತ್ತನೆ; 9. ಕಲಹ; 10. ದುಡುಕು; 12. ಶಾರೀರ; 14. ರುದಿತ; 15. ಅಂತಿಮ; 16. ತವರ

## ಪ್ರಶ್ನಾಂಕಣ

# ಘೇಂಡಾ ಪ್ರಬೇಧ; ಎಷ್ಟು ವಿಧ..?

ಘೇಂಡಾ ಮೃಗ. ಅದರ ಮುಖದ ಮೇಲೆ ಬೆಳೆವ ಕತ್ತಿಯ ಆಕಾರದ ಕೊಂಬಿನಿಂದಾಗಿ ಈ ಪ್ರಾಣಿ ಖಡ್ಗಮೃಗ ಎಂದೂ ಪ್ರಸಿದ್ಧ. ವಿಚಿತ್ರ ರೂಪದ, ಭಾರೀ ಗಾತ್ರದ, ಸಾಮಾನ್ಯವಾಗಿ ಶಾಂತ ಸ್ವಭಾವದ, ಸಂಪೂರ್ಣ ಸಸ್ಯಾಹಾರಿಯೂ ಆದ ಈ ಪ್ರಾಣಿ ಸ್ತನಿ ವರ್ಗಕ್ಕೆ ಸೇರಿದೆ. ಘೇಂಡಾ ಮೃಗಗಳು ಆಫ್ರಿಕಾ ಖಂಡ ಮತ್ತು ಏಷ್ಯಾ ಖಂಡದಲ್ಲಷ್ಟೇ ನೈಸರ್ಗಿಕ ನೆಲೆ ಹೊಂದಿದೆ. ಪ್ರಸ್ತುತ ಘೇಂಡಾ ಮೃಗಗಳ ಐದು ಪ್ರಭೇದಗಳು ಅಸ್ತಿತ್ವದಲ್ಲಿವೆ.

1) ಬಿಳಿ ಘೇಂಡಾ: ಆಫ್ರಿಕಾ ಖಂಡದಲ್ಲಿ, ಅಲ್ಲೂ ಪ್ರಮುಖವಾಗಿ ದಕ್ಷಿಣ ಆಫ್ರಿಕಾದಲ್ಲಿರುವ ಈ ಪ್ರಭೇದ (ಚಿತ್ರ – 1) ಘೇಂಡಾಗಳಲ್ಲೆಲ್ಲ ಅತ್ಯಂತ ದೈತ್ಯ ಗಾತ್ರದ್ದು. ಆನೆಯ ನಂತರದ ಅತ್ಯಂತ ದೈತ್ಯ ನೆಲವಾಸಿ ಪ್ರಾಣಿ ಇದೇ. ಹೆಸರು ಬಿಳಿ ಘೇಂಡಾ ಆದರೂ ವಾಸ್ತವವಾಗಿ ಅದರದು ಕಂದು ಬಣ್ಣ. ಬೃಹತ್ ಈಟಿಯಂತಹ ಜೋಡಿ ಕೊಂಬಿನ ಈ ಪ್ರಭೇದ ಮೂರು ಟನ್ ತೂಕ ತಲುಪುತ್ತದೆ. ಸದ್ಯದ ಒಟ್ಟು ಸಂಖ್ಯೆ ಇನ್ನಷ್ಟು ಸಾವಿರ.

2) ಕಪ್ಪು ಘೇಂಡಾ: ಈ ಪ್ರಭೇದವು ಆಫ್ರಿಕಾ ಖಂಡಕ್ಕೇ ಸೀಮಿತ (ಚಿತ್ರ – 2). ಇದಕ್ಕೂ ಎರಡು ಕೊಂಬುಗಳು; ಅತ್ಯಪರೂಪವಾಗಿ ಪುಟ್ಟದೊಂದು ಮೂರನೆಯ ಕೊಂಬೂ ಉಂಟು. ಒಟ್ಟು ಸಂಖ್ಯೆ 4800.

3) ಭಾರತದ ಘೇಂಡಾ: ಈಶಾನ್ಯ ಭಾರತ ಮತ್ತು ನೇಪಾಳಕ್ಕೆ ಸೀಮಿತವಾಗಿರುವ ಒಂದೇ ಕೊಂಬು. (ಚಿತ್ರ – 3) ಮಡಿಕೆ ಮಡಿಕೆಯಾಗಿ ಹೊದಿಸಿದಂತೆ ಕಾಣುವ ದಪ್ಪನಾದ ಒರಟು ಚರ್ಮದಿಂದಾಗಿ 'ಯುದ್ಧ




ಟ್ಯಾಂಕ್' ನಂತೆ ಕಾಣುವ ಈ ಪ್ರಭೇದ ಎರಡು ಟನ್ ತೂಗುತ್ತದೆ. ಇದರ ಜನಸಂಖ್ಯೆ 2600.

4) ಜಾವನ್ ಘೇಂಡಾ: ಜಾವಾ ದ್ವೀಪದಲ್ಲಿ ಕೇವಲ ಐವತ್ತಷ್ಟೇ ಉಳಿದಿರುವ ಈ ಪ್ರಭೇದದ್ದೇ (ಚಿತ್ರ – 4) ಅತ್ಯಲ್ಪ ಸಂಖ್ಯೆ. ಇದರದ್ದೂ ಒಂದೇ ಕೊಂಬಿನ ಅಲಂಕಾರ.

5) ಸುಮಾತ್ರನ್ ಘೇಂಡಾ: ಮಲೇಷಿಯಾ ಮತ್ತು ಇಂಡೋನೇಷಿಯಾದ ಅಡವಿಗಳಲ್ಲಿರುವ (ಚಿತ್ರ – 5) ಜೋಡಿ ಕೊಂಬಿನ ಈ ಪ್ರಭೇಧದ್ದೇ ಅತ್ಯಂತ ಪುಟ್ಟ ಗಾತ್ರ. ಇದರ ಒಟ್ಟು ಸಂಖ್ಯೆ ಸುಮಾರು ಇನ್ನೂರು.

ಘೇಂಡಾಗಳು ಅರವತ್ತು ದಶಲಕ್ಷ ವರ್ಷಗಳಿಂದ ಧರೆಯಲ್ಲಿವೆ. ಕಳೆದ ಒಂದು ನೂರು ವರ್ಷಗಳಲ್ಲಿ ಅವುಗಳ ಒಟ್ಟು ಸಂಖ್ಯೆ ಐದು ಲಕ್ಷದಿಂದ ಇಪ್ಪತ್ತೆಂಟು ಸಾವಿರಕ್ಕೆ ಇಳಿದಿದೆ. ಕೇವಲ ಮನುಷ್ಯರಿಂದಾಗಿ ಹೀಗೆ ಅಲ್ಪ ಸಂಖ್ಯಾತರಾಗಿ ಅಳಿವ ಹಾದಿಯಲ್ಲಿವೆ.

■ ಎನ್. ವಾಸುದೇವ್